ಜೆಎಸ್‌ಎಸ್ ಮಹಾವಿದ್ಯಾಪೀಠ
ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು
(ಸ್ವಾಯತ್ತ)
ಬಿ.ಎನ್. ರಸ್ತೆ, ಮೈಸೂರು - 570 025
ಪ್ರಚ್ಛನ್ನ ಉತ್ಕೃಷ್ಟತಾ ಕಾಲೇಜು ಎಂದು ಯುಜಿಸಿಯಿಂದ ಗುರುತಿಸಲ್ಪಟ್ಟಿದೆ
(ಮೈಸೂರು ವಿಶ್ವವಿದ್ಯಾನಿಲಯದಿಂದ ಸ್ವಾಯತ್ತತೆ ಪಡೆದಿದೆ * ನ್ಯಾಕ್‌ನಿಂದ 'ಎ' ದರ್ಜೆ ಮಾನ್ಯತೆ ಪಡೆದಿದೆ)
Ph: 0821-2548236 & 2548380. FAX: 0821-2548238 E-mail: jssautonomous@gmail.com Website: JSSCACS.edu.in

ದಿನಾಂಕ: 23.08.2017

# ಪ್ರಕಟಣೆ ಕೃಪೆಗಾಗಿ

## ತೃಪ್ತಿಯ ಓದಿಗಿಂತ ಆತ್ಮತೃಪ್ತಿಯ ಓದು ಇಂದಿನ ಅಗತ್ಯವಾಗಿದೆ

-ಪ್ರೊ. ಡಿ.ಎಸ್. ಗುರು

"ಮೌಲ್ಯವಿಲ್ಲದ ಶಿಕ್ಷಣ ನಿಷ್ಪ್ರಯೋಜಕ, ಕೇವಲ ನಿಮ್ಮ ತೃಪ್ತಿಗಾಗಿ ಓದಬೇಡಿ, ಅಧ್ಯಯನ ಮಾಡಬೇಡಿ. ಆತ್ಮತೃಪ್ತಿಗಾಗಿ ಅಧ್ಯಯನ ನಿರತರಾಗಿ. ಆಗ ಮಾತ್ರ ಸುಂದರ ಬದುಕು ಸದೃಢ ಸಮಾಜ ನಿರ್ಮಾಣ ಸಾಧ್ಯ" ಎಂದು ಮೈಸೂರು ವಿಶ್ವವಿದ್ಯಾನಿಲಯದ ಗಣಕಯಂತ್ರ ವಿಭಾಗದ ಮುಖ್ಯಸ್ಥರಾದ ಪ್ರೊ. ಡಿ.ಎಸ್. ಗುರುರವರು ಹೇಳಿದರು.

ಮೈಸೂರು ನಗರದ ಬಿ.ಎನ್. ರಸ್ತೆಯಲ್ಲಿರುವ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನಲ್ಲಿ ನಡೆದ ಪ್ರಥಮ ಪದವಿ ತರಗತಿಗಳಿಗೆ ಸ್ವಾಗತ ಮತ್ತು ಅರಿವು ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಅವರು ಮಾತನಾಡುತ್ತಿದ್ದರು. "ಸೆಮಿಸ್ಟರ್ ಪದ್ಧತಿಯು ವಿದ್ಯಾರ್ಥಿಗಳು ಸದಾ ಜಾಗರೂಕರಾಗಿ ಅಧ್ಯಯನದಲ್ಲಿ ನಿರತರಾಗುವಂತೆ ಮಾಡುತ್ತದೆ. ಅದರಲ್ಲಿಯೂ ಸಿಬಿಸಿಎಸ್ ವ್ಯವಸ್ಥೆಯು ಒಂದು ಉನ್ನತ ಶೈಕ್ಷಣಿಕ ವ್ಯವಸ್ಥೆಯಾಗಿದ್ದು, ನಿರಂತರ ಮೌಲ್ಯಮಾಪನಕ್ಕೆ ಒತ್ತುಕೊಡುತ್ತದೆ. ಇದು ಜ್ಞಾನಾತ್ಮಕ ಬೆಳವಣಿಗೆಗೆ ಸಹಕಾರಿಯಾಗಿ ಕಲಿಕೆಯನ್ನು ಜಾಗೃತಗೊಳಿಸುತ್ತದೆ. ಈ ವ್ಯವಸ್ಥೆಯನ್ನು ಅಳವಡಿಸಿಕೊಳ್ಳುವ ಮೂಲಕ ಉನ್ನತ ಶಿಕ್ಷಣಕ್ಕೆ ಕಾಲೇಜು ಪ್ರಾಧಾನ್ಯತೆಯನ್ನು ನೀಡುತ್ತಿದೆ. ಇಂತಹ ಕಾಲೇಜಿನಲ್ಲಿ ಅಧ್ಯಯನ ಮಾಡುತ್ತಿರುವ ನಿಮಗೆ ಕಂಡಿತ ಉತ್ತಮ ಭವಿಷ್ಯವಿರುತ್ತದೆ" ಎಂದು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಮೈಸೂರು ವಿಶ್ವವಿದ್ಯಾನಿಲಯದ ಕಾಲೇಜು ಅಭಿವೃದ್ಧಿ ಮಂಡಳಿಯ ನಿರ್ದೇಶಕರಾದ ಡಾ. ಎಸ್. ಶ್ರೀಕಂಠಸ್ವಾಮಿಯವರು ಮಾತನಾಡಿ "ಅಧ್ಯಯನ ಮತ್ತು ಓದಿನಲ್ಲಿ ಆಯ್ಕೆ ಯಾವುದೇ ಇರಲಿ ಕೀಳರಿಮೆ ಹೊಂದಬಾರದು, ನೀವು ಆಯ್ಕೆ ಮಾಡಿಕೊಂಡ ವಿಷಯಗಳಲ್ಲಿಯೇ ಉತ್ತಮ ಜ್ಞಾನವನ್ನು ಪಡೆದು ಉನ್ನತ ಸಾಧನೆಯನ್ನು ಮಾಡಬಹುದು. ಏಕೆಂದರೆ ಜ್ಞಾನಕ್ಕೆ ತಾರತಮ್ಯವಿಲ್ಲ. ಆದ್ದರಿಂದ ನಿರಂತರವಾಗಿ ಅಧ್ಯಯನ ಮಾಡಿ ಉನ್ನತಸ್ಥಾನಕ್ಕೆ ಏರಿ. ಅಭಿವೃದ್ಧಿಶೀಲ ರಾಷ್ಟ್ರದ ನಿರ್ಮಾಣದಲ್ಲಿ ಸಹಭಾಗಿಗಳಾಗಿ" ಎಂದು ಕರೆ ನೀಡಿದರು.

ಪ್ರಾಸ್ತಾವಿಕ ಮಾತುಗಳನ್ನಾಡಿದ ಕಾಲೇಜು ಸಮುಚ್ಚಯದ ಮುಖ್ಯ ಕಾರ್ಯನಿರ್ವಾಹಕರಾದ ಪ್ರೊ. ಬಿ.ವಿ. ಸಾಂಬಶಿವಯ್ಯರವರು ಕಾಲೇಜಿನ ಬಗ್ಗೆ ಮಾಹಿತಿ ನೀಡಿ "ಇಂದಿನ ಔದ್ಯೋಗಿಕ ಕ್ಷೇತ್ರದಲ್ಲಿ ಉತ್ತಮ ಅವಕಾಶಗಳಿವೆ. ಅವುಗಳ ಸದುಪಯೋಗವಾಗಬೇಕಾದರೆ, ಕೌಶಲ್ಯಯುತ ಶಿಕ್ಷಣ ಅವಶ್ಯಕತೆ ಇದೆ. ಆ ದೆಸೆಯಲ್ಲಿ ನಮ್ಮ ಕಾಲೇಜು ಕೌಶಲ್ಯಯುಕ್ತ ಕೋರ್ಸುಗಳನ್ನು ನಡೆಸುತ್ತಿದೆ. ನೀವು ಅವುಗಳ ಸದುಪಯೋಗವನ್ನು ಪಡೆಯಿರಿ" ಎಂದರು.

ಕಾರ್ಯಕ್ರಮದಲ್ಲಿ ಎನ್‌ಸಿಸಿ, ಪರೀಕ್ಷಾ ವಿಭಾಗ, ಎನ್‌ಎಸ್‌ಎಸ್, ಕ್ರೀಡಾ ವಿಭಾಗ, ರೋವರ್ಸ್, ರೆಡ್‌ಕ್ರಾಸ್, ನೇಮಕಾತಿ ಘಟಕ, ಸಾಂಸ್ಕೃತಿಕ ವೇದಿಕೆ ಹೀಗೆ ವಿವಿಧ ಘಟಕಗಳ ಪರಿಚಯವನ್ನು ಮಾಡಿಕೊಡಲಾಯಿತು.

ಕು. ಪೂಜ ಪ್ರಾರ್ಥಿಸಿದರು, ಕಾಲೇಜಿನ ಪ್ರಾಂಶುಪಾಲರಾದ ಪ್ರೊ. ಎಂ ಮಹದೇವಪ್ಪನವರು ಸ್ವಾಗತಿಸಿದರು, ಪ್ರೊ. ಎಸ್.ಬಿ. ನಾಗರಾಜಮೂರ್ತಿಯವರು ವಂದಿಸಿದರು. ಡಾ. ಬಿ. ಪ್ರಭುಸ್ವಾಮಿ ಕಾರ್ಯಕ್ರಮ ನಿರೂಪಿಸಿದರು.

(ಪ್ರೊ. ಎಂ. ಮಹದೇವಪ್ಪ)
ಪ್ರಾಂಶುಪಾಲರು

PRINCIPAL
JSS College of Arts, Commerce & Science
Ooty Road, MYSURU-25

ಗೆ
ಸಂಪಾದಕರು / ವರದಿಗಾರರು

- - - - - - - - - - - - - - - -

- - - - - - - - - - - - - - - -